**ಕವನ:** KKS ರಜತೋತ್ಸವ - 2014

**ರಚನೆ:** ಮೋಹನ್ ರಾಂ

**ರಾಗ:** ಕನ್ನಡ ನಾಡಿನ ವೀರ ರಮಣಿಯ ( ನಾಗರಹಾವು ಚಿತ್ರ )

ಕನ್ನಡ ನಾಡಿನ ಹೆಮ್ಮೆಯ ಜನಗಳ
ಸ್ಯಾನ್ ಆಂಟೋನೀಯೋ ಕನ್ನಡ ಸಂಘದ
ಚರಿತೆಯ ನಾವು ಹಾಡುವ ||

ನಮ್ಮ ಊರಿನ ಆಲಮೊ ಕೋಟೆ
ವೀರರು ನೆತ್ತರ ಹರಿಸಿದ ಕೋಟೆ
ಕನ್ನಡ ಸಂಘವ ಇಲ್ಲಿ ಸ್ಥಾಪಿಸಿ
ಕನ್ನಡ ಧ್ವಜವ ಮೇಲೆ ಹಾರಿಸಿ
ಕುವೆಂಪು ಹೆಸರನು ಇತ್ತವರು
ನಮ್ಮ ಹೆಮ್ಮೆಯ ಊರ ಹಿರಿಯರು || ಕನ್ನಡ ||

ಮಡ್ಕೇರಿ ಬೆಂಗ್ಳೂರು ಶಿಮೊಗ್ಗ ಮೈಸೂರು
ಬೆಳ್ಗಾವಿ ತುಂಕೂರು ಹುಬ್ಬಳ್ಳಿ ಮಂಗ್ಳೂರು
ಎಲ್ಲೆಡಿಯಂದ ಬಂದರು ಜನರು
ಹೆಮ್ಮೆಯ ನಾಡಿನ ಕನ್ನಡದವರು
ಜನ್ಮಭೂಮಿಯು ಆ ನಾಡು
ಕರ್ಮಭೂಮಿಯು ಈ ಬೀಡು || ಕನ್ನಡ ||

ಅಕ್ಕ ಉತ್ಸವ ಊರಿಗೆ ಬರಲು
ಎಲ್ಲರೂ ಸೇರಿ ಕುಣಿದು ನಲಿಯಲು
ಹಾಡು ಕುಣಿತ ಸಂತಸ ತರಲು
ದಸರೆಯ ಉತ್ಸವ ಮೇರೆ ಮೀರಲು
ಅಮರಳಾದಳು ಲಲಿತಮ್ಮ
ನಮ್ಮ ಹೆಮ್ಮೆಯ ಲಲಿತಮ್ಮ || ಕನ್ನಡ ||

ರಜತೋತ್ಸವದ ವರುಷ ತುಂಬಲು
ಹೆಮ್ಮೆಯ ಸಂತಸ ನಮ್ಮದಾಗಲು
ವಿರೂಪಾಕ್ಷನ ದಯೆ ನಮಗಿರಲು
ಭುವನೇಶ್ವರಿಯ ಹರಕೆಯು ಸಿಗಲು
ಎಲ್ಲಾದರು ಇರು ಎಂತಾದರು ಇರು
ಎಂದೆಂದಿಗು ನೀ ಕನ್ನಡವಾಗಿರು || ಕನ್ನಡ ||